ಮೆಸೇಜನ್ನು ಎದುರೊಡ್ಡಿದ. ಇಸಕೊಂಡು ನೋಡಿದೆ. ಉದ್ದಾನುದ್ದ ಬರೆದಿದ್ದಳು. ಸುಮ್ಮನೆ ಅಲ್ಲಲ್ಲಿ ಕಣ್ಣಾಡಿಸಿದೆ. ಆ ಮುಂದಕ್ಕೆ, ನನ್ನ ವ್ಯವಧಾನದ ಧ್ಯಾಸವೇ ತಪ್ಪಿಹೋಯಿತು!

'ಡ್ಯಾಡ್... ನಾನು ನಿಜಕ್ಕೂ ಈ ಅನಿರುತಂ ಜೊತೆ ಸುಖವಾಗಿಲ್ಲ. ಅಮ್ಮನ ಒತ್ತಾಯದ ಮೇರೆಗೆ ಅಲೇಕ್ಸ್ಯನಿಂದ ವಿಮುಖಗೊಂಡಿದ್ದೆ... ಇವನಿನ್ನೂ ಹುಡುಹುಡುಗು ಹುಡುಗ. ಗಂಡಸಲ್ಲ... ನಾನು ನಿನ್ನ ವಯಸ್ಸಿನ ಗಂಡಸರೊಡನೆ ಇರಬಯಸುತ್ತೇನೆ. ನನ್ನ ಅಸ್ತಿತ್ವದ ಅರ್ಥವಿರುವುದೇ ನಡುವಯಸ್ಕ ಗಂಡಸರೊಡನೆ... ಹೀಗಾಗಿ ಈ ಮದುವೆಯನ್ನು ಮುರಿದರೆ ತಪ್ಪು ತಿಳಿಯಬೇಡಿ... ನನಗೆ ನನ್ನ ಸಂತೋಷ ಮುಖ್ಯ...' ಸಿಡಿಲಂತಹ ಸಿಡಿಲನ್ನೇ ಬರೆದು ರವಾನಿಸಿದ್ದಾಳನ್ನಿಸಿ ರಾಚಿಬಂತು! ಮನಸು ಭೋರ್ಗರೆಯಿತು.

ಕಡೆಗೂ, ಅಕ್ಷತೆಯನ್ನೆರಚಿದೆನೋ, ಇದ್ದಲ್ಲೇ ಕೈಚೆಲ್ಲಿದೆನೋ... ಬಲು ಹೊತ್ತು ಗೊತ್ತಾಗಲಿಲ್ಲ.

★★★

ಆಘಾತದ ನಡುವೆಯೇ ಎದ್ದು ಬಾಲ್ಕನಿಗೆ ಸರಿದೆ. 'ಲೆಟ್ಸ್ ಗೋ ಇನ್ಟು ದಿ ಡೆಕ್...' ಅಂತಂದು, ಮಧುಕರಿಗೂ ಹಿಂಬಾಲಿಸಹೇಳಿದೆ. ನಮ್ಮಿಬ್ಬರ ಹಿಂದೆ ಹಸೆಯಲ್ಲಿದ್ದ ಅಲೇಕ್ಸ್ಯನ ಎರಡೂ ಕಣ್ಣುಗಳೂ ನಮ್ಮೊಟ್ಟಿಗೇ ಬೆನ್ನಿಗಂಟಿ ಬಂದವನ್ನಿಸಿದವು. ಬೆಳ್ಳಂದೂರುಕೆರೆಯಲ್ಲಿ ಆಲ್ಮೋಸ್ಟ್ ಮುಳುಗಿದ್ದಂತಿದ್ದ ಬಾಲ್ಕನಿಯು, ನಮ್ಮಿಬ್ಬರನ್ನು, ಒಟ್ಟೊಟ್ಟಿಗೇ ನೀರಿನೊಳನೀಡಿ ಮುಳುಗಿಸಲಿಕ್ಕೆದೆಯನ್ನಿಸಿತು. ಕೆರೆಯೆಂಬ ಕೆರೆ ಹೊಕ್ಕರೂ ಆಕಾಶದಿಂದೆರಗಿ ಬಂದ ಸಿಡಿಲಿನುರಿ ತಗ್ಗೀತೆ ಎಂದನಿಸುವುದಾಯಿತು. 'ಎಲ್ಲಿ, ನಿನ್ನ ಮೊಬೈಲಿಲ್ಲಿ ಕೊಡು...' ಎಂದು ಮಧುಕರಿಯ ಕೈಫೋನನ್ನು ಇಸಕೊಂಡು, ಮತ್ತೊಮ್ಮೆ ಐಕ್ಯಾಳ ಮೆಸೇಜೊಳಕ್ಕಿಳಿದೆ. ತನ್ನ ಅಸ್ತಿತ್ವಕ್ಕೆ ಅರ್ಥವಿರುವುದೇ ನಡುವಯಸ್ಕ ಗಂಡಸರೊಡನೆ... ಥೂಥುಥು, ಹುಚ್ಚು ತಾನೇ?! ಛಲವಿಲ್ಲದ ಮಾತು! ಯಾರಾದರೂ ಒಪ್ಪತಕ್ಕದ್ದೆ? ಎರಡು ಮಕ್ಕಳಿದ್ದಾರೆಂಬ ಗೊಡವೆ ಬೇಡವೆ? ಯೋಚನೆಗಳು ಮುಗಿಬಿದ್ದವು. 'ಸುಮ್ಮನೆ ಇಷ್ಟೇಕೆ ಟೆನ್ಷನ್ ಮಾಡಿಕೋತೀ, ಮೋದ್? ಅವಳಿಗೆ ತನ್ನ ಆಯ್ಕೆ ತಪ್ಪು ಅಂತ ಈಗ ಅನ್ನಿಸಿದ್ದಿರಬಹುದು... ಯಾರಿಗಾದರೂ ತನ್ನ ಸಂತೋಷ ಮುಖ್ಯ ಅಲ್ಲವಾ?' ಅಂತನ್ನುತ್ತ ಮಧುಕರಿ, ಮಗಳನ್ನು ಸಮರ್ಥಿಸಿಕೊಳ್ಳುವಂತೆ ಆಡಿದ. 'ಈಗ ನಿನ್ನ ಫ್ರೆಂಡ್ ಅಲೇಕ್ಸ್ಯನನ್ನೇ ನೋಡು... ನಿನ್ನ ಲೆಕ್ಕದಲ್ಲಿ ನೋಡಿದರೆ ಈ ಹುಡುಗಿಯೇನು ಅವನಿಗೆ ತಕ್ಕವಳೇ? ಮಗಳಂತನಿಸೋಲ್ಲ?' ಎಂದು, ಬಂದೆರಗಿದ ಸಿಡಿಲ ಸಮಕ್ಕು ಖುದ್ದು ಸಿಡಿಯುತ್ತಲಾಡಿದ. ಅಥವಾ, ಸಿಡಿಲಿನ ಮಡಿಲಿಗೇ ಕೈಯಿಕ್ಕಿ ಕಾವು ಗುಡಿಸುವಂತಾಡಿದ. ರೇಗಿಹೋಯಿತು. 'ಜಸ್ಸ್... ಟ್... ಸ್ಟಾಪಿಟ್ಟ್... ಏನೇನೋ ಮಾತಾಡಬೇಡ...' ನಾನೂ ಅಬ್ಬರಿಸಿಬಿಟ್ಟೆ. 'ನಿನ್ನ ಮಗಳನ್ನ ಸರಿ ಅನ್ನಲಿಕ್ಕೆ ಇನ್ನೊಬ್ಬರ ತಪ್ಪಿನ ಪುರಾವೆ ಕೊಡಬೇಡ!' ಹೀಗೆ ಹೇಳುವಾಗ ನನ್ನ ಮೈಯೊಡನೆ, ಬಾಲ್ಕನಿಯ ನೆಲವೂ ಮೇಲಿನ ಬಾನೂ – ಒಡನೊಡನೆ ಕಂಪಿಸಿದವು. ಕೆರೆಯ ನೀರೊಳಗೆ ಲೋಲಕಲ್ಲೋಲವುಂಟಾಯಿತು. ಇಷ್ಟಾದ ಮೇಲೆ, ಕೆಲಹೊತ್ತು – ಮಧುಕರಿ ನನ್ನನ್ನು ನನ್ನಷ್ಟಕ್ಕೆ ಇರಗೊಟ್ಟ. ಮಾತನಾಡದೆ ಕೆರೆಯನ್ನೇ ದಿಟ್ಟಿಸುತ್ತಳಿದ. 'ಈ ಐಕಿಗೆ ಯಾಕೆ ಇಂಥ ದುರ್ಬುದ್ಧಿ – ಹೇಳು ಮಧೂ... ನಾನೇನು ತಪ್ಪು ಮಾಡಿದ್ದೇಂತ ಹೀಗೆಲ್ಲ ಪರಿಪಾಟಲಾಗುತಿದೆ?' ಚಿಂತೆಯೊಡನೆ ಉಮ್ಮಳಿಸಿದ ಅಳಲನ್ನು ಹತ್ತಿಕ್ಕಲಾಗದೆ ಹೇಳಿದೆ. ಕೆರೆಯುದ್ದಕ್ಕೂ ಕೋಡಿಯಾಗಿ ಇಳಿದೆ. ನನಗೆ ತಪ್ಪನಿಸಿದ್ದು, ಇವನಿಗನ್ನಿಸದೆ... ಅಂತೆಲ್ಲ ಕಳವಳಿಸಿದ್ದೂ ಆಯಿತು.

'ಸುಮೋದಿನಿ ಮೇಡಂ... ಇಲ್ಲಿದ್ದೀರಾ? ನಿಮಗೋಸ್ಕರ ಎಲ್ಲ ಕಡೆ ನೋಡಿಕೊಂಡು ಬಂದೆ...'